ಚಿಕ್ಕಮ್ಮ. ನಿಜ ಹೇಳಬೇಕೆಂದರೆ ಇದರ ಕೆಳಗಡೆ ಇರುತ್ತದಲ್ಲ ಕಪ್ಪನೆಯ ಒಂದು ಪೆಟ್ಟಿಗೆ ಅದರಲ್ಲಿ ಎಲ್ಲಾ ವಿಷಯಗಳು ಅಡಕವಾಗಿರುತ್ತವೆ. ಇದನ್ನು ಮಾನಿಟರ್ ಎನ್ನುತ್ತಾರೆ. ಇದರಲ್ಲಿ ಯಾವ ವಿಷಯವೂ ಕೂಡ ಇರುವುದಿಲ್ಲ. ನಾನು ಒಮ್ಮೆ ನಿಮ್ಮ ಮನೆಗೆ ಬಂದು ಅದನ್ನು ತೆರೆದು ತೋರಿಸುತ್ತೇನೆ. ಈಗ ನೀವು ಇದನ್ನು ತೆಗೆದುಕೊಂಡು ಮನೆಗೆ ಹೋಗಿ. ನಾನು ಒಮ್ಮೆ ಹುಡುಗನ್ನ ನಿಮ್ಮ ಜೊತೆ ಕಳಿಸಿ ಕೊಡ್ತಿನಿ ಅವನು ನಿಮ್ಮ ಮನೆಯಲ್ಲಿ ಇದು ಹೇಗಿತ್ತೊ ಹಾಗೆಯೆ ಜೋಡಿಸಿ ಇಡ್ತಾನೆ. ನಯಾಜ್‌ಗೆ ಈ ವಿಷಯ ಗೊತ್ತಾದರೆ ಅವನು ತೀರ ಬೇಸರ ಪಟ್ಟುಕೊಳ್ತಾನೆ. ಅವನು ಮನೆಗೆ ಹಿಂದಿರುಗುವುದರೊಳಗಾಗಿ ಮನೆಗೆ ಹೋಗಿ' ಎಂದ. ಹಾಗೂ 'ರೇ ನಯೀಮ್ ಆಂಟಿ ಕೇ ಸಾಥ್ ಘರ್ಕೋ ಜಾ. ನಯಾಜ್ ಭಯ್ಯ ಕೆ ಆನೇತಕ್ ಸಿಸ್ಟಮ್ ಜೋಡ್ದೇ' ಎಂದ.

ಆ ಕ್ಷಣದಲ್ಲಿ ಆಕೆ ಇಡೀ ಪ್ರಪಂಚದ ತಾಯಂದಿರ ಪ್ರತಿನಿಧಿಯಾಗಿ ಕೇಳಬೇಕಾದ ಪ್ರಶ್ನೆಗಳನ್ನು ಕೇಳುತ್ತಿದ್ದಾಳೆ ಹಾಗೂ ತಾನು ಒಬ್ಬ ಜವಾಬುದಾರಿಯುತ ಮುಸ್ಲಿಂ ಯುವಕನಾಗಿ ಇಡೀ ಪ್ರಪಂಚ ಕೇಳುತ್ತಿರುವ ಪ್ರಶ್ನೆಗಳಿಗೆ ಪ್ರಾತಿನಿಧಿಕವಾಗಿ ತಾನು ಉತ್ತರಿಸಲೇ ಬೇಕಾದ ಹೊಣೆಗಾರಿಕೆ ತನ್ನ ಮೇಲೆ ಇದೆ ಎಂದು ಅವನಿಗೆ ಅನಿಸತೊಡಗಿತು.

ಅಷ್ಟರಲ್ಲೇ ರೆಹಮತ್ ಮತ್ತು ಮುಜೀಬ್‌ನ ದೃಷ್ಟಿ ಬಾಗಿಲ ಬಳಿ ಹೋಯಿತು. ಗಾಜಿನ ಬಾಗಿಲನ್ನು ನಿರ್ದಯವಾಗಿ, ನಿಷ್ಠುರವಾಗಿ ತಳ್ಳಿಕೊಂಡು ಒಳಬಂದ ನಯಾಜ್ ಮುಜೀಬ್‌ನನ್ನು ಒಮ್ಮೆ ದುರುಗುಟ್ಟಿ ನೋಡಿ ತಾಯಿಯತ್ತ ತಿರುಗಿದ. ಅವನು ಬಯ್ಯಲಿಲ್ಲ ಉಸಿರೆತ್ತಲಿಲ್ಲ. ಆದರೆ, ಅವನ ಆ ನೋಟ ಒಂದರಲ್ಲೆ ಬಾಂಬ್ ಸಿಡಿಯಿತು; ಅಗಾಧ ಕಂದರ ಸೃಷ್ಟಿಯಾಯಿತು. ಅವರಿಬ್ಬರ ನಡುವೆ ಸಪ್ತ ಸಾಗರಗಳ ಅಂತರ ಮೂಡಿತು. ಅವಳು ಯಾರೋ ಒಬ್ಬ ಅಪರಿಚಿತ ಮುದುಕಿಯೇನೊ ಎಂಬ ನಿರ್ದಯ ನಿಕೃಷ್ಟ ದೃಷ್ಟಿಯಲ್ಲಿ ನೋಡಿದ ಅವನ ಕಣ್ಣುಗಳು ಬೆಂಕಿ ಉಗುಳ ತೊಡಗಿದವು. ಆಯಾಚಿತವಾಗಿ ತನ್ನ ಮನದ ಭ್ರಮೆಗಳು ಮತ್ತು ವಾಸ್ತವತೆಗಳ ಅಂತರ್ಯುದ್ಧದಲ್ಲಿ ಸೋತು ಹಣ್ಣಾಗಿ, ಖಿನ್ನತೆಗೆ ಜಾರಿ ಮುಳುಗುವವನು ಹುಲ್ಲು ಕಡ್ಡಿಯ ಆಸರೆಯನ್ನು ಬಯಸುವಂತೆ ಆರ್ತತೆಯಿಂದ ಕೂಡಿದ ಅವಳು ಅದೋವದನಳಾಗಿ ಬಾಯಿ ಕಳೆದು ಕೊಂಡು ಮನಸ್ಸಿನಲ್ಲೆ ಆರ್ತಳಾಗಿ ಬೇಡಿಕೊಂಡಳು 'ಕ್ಷಮಿಸು ಮಗನೆ'! ಯಾರ ಮಾತು ಯಾರಿಗೆ ಅರ್ಥವಾಯಿತೋ ಯಾರ ಎದೆಯ ನೋವನ್ನು ಯಾರು ತಮ್ಮದಾಗಿಸಿಕೊಂಡರೋ.

## ಬಾನು ಮುಷ್ತಾಕ್

ಪ್ರಸ್ತುತ ಹಾಸನದಲ್ಲಿ ನೆಲೆಸಿರುವ ಬಾನು ಮುಷ್ತಾಕ್ ಅವರು ವೃತ್ತಿಯಲ್ಲಿ ನ್ಯಾಯವಾದಿ. 'ಹೆಜ್ಜೆ ಮೂಡಿದ ಹಾದಿ', 'ಬೆಂಕಿ ಮಳೆ', 'ಎದೆಯ ಹಣತೆ', 'ಸಫೀರಾ', 'ಬಡವರ ಮಗಳು ಹೆಣ್ಣಲ್ಲ', 'ಇಬ್ಬನಿಯ ಕಾವು' ಅವರ ಕಥಾ ಸಂಕಲನಗಳು. ಅವರ 'ಕರಿನಾಗರಗಳು' ಎಂಬ ಕತೆಯನ್ನು ಆಧರಿಸಿ ಗಿರೀಶ ಕಾಸರವಳ್ಳಿ ಅವರು ನಿರ್ದೇಶಿಸಿದ 'ಹಸೀನಾ' ಸಿನಿಮಾ ಮೂರು ರಾಷ್ಟ್ರಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಅವರ ಅನೇಕ ಕತೆಗಳು ಹಿಂದಿ, ಮಲಯಾಳಂ, ಪಂಜಾಬಿ, ಇಂಗ್ಲಿಷ್, ಉರ್ದು ಮತ್ತು ತಮಿಳು ಭಾಷೆಗಳಿಗೆ ಅನುವಾದಗೊಂಡಿವೆ. ಆದಿಲ್‌ಶಾಹಿ ಇತಿಹಾಸ ಪುಸ್ತಕ 'ತಾರೀಕ್‌ಎ ಫರಿಷ್ತಾ'ವನ್ನು ಕನ್ನಡಕ್ಕೆ ಅನುವಾದಿಸಿರುವ ಅವರ ಕವನ, ಪ್ರಬಂಧ ಸಂಕಲನಗಳೂ ಪ್ರಕಟವಾಗಿವೆ.